ಗಮನದಲ್ಲಿಟ್ಟುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. It will hurt other's feelings.

ಶ್ರೀ ಎಸ್.ಎಂ. ಯಾಹ್ಯ : ನಮ್ಮ ಉತ್ತರವನ್ನು ಕೇಳಿಕೊಳ್ಳಿ. ಇದು ಸಮಾಧಾನ ಆಗಲಿಲ್ಲವೆಂದರೆ, ನಂತರ ನೀವು ತೀರ್ಮಾನ ಮಾಡಿ. There is some point. ನೀವು ಹೇಳಿದಹಾಗೆ ಮಾಡುವುದಕ್ಕೆ ಬರುವುದಿಲ್ಲ. ನೀವು ಹೇಳಿದಹಾಗೆ ಕೇಳುವುದಕ್ಕೆ ಬರುವುದಿಲ್ಲ. ನಮಗೆ ಒಂದು ಉದ್ದೇಶ ಇದೆ, ಆ ಉದ್ದೇಶ ಪ್ರಕಾರ ಕೆಲಸ ಮಾಡಬೇಕಾಗಿದೆ.

(Interruptions)

ಉಪಾಧ್ಯಕ್ಷರು : ನೀವು ಇಲ್ಲಿಂದ ಏನನ್ನು ಮಾತನಾಡರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಈಶ್ವರಪ್ಪನವರೇ ದಯಮಾಡಿ ಹೋಗಿ ಕುಳಿತುಕೊಳ್ಳಿ.

Sri S.M. Yahya : How can he treaten our Members here. ದಯಮಾಡಿ ವಾಪಸ್ ಹೋಗಿ ನನ್ನ ಉತ್ತರವನ್ನು ಕೇಳಿ.

ಉಪಾಧ್ಯಕ್ಷರು : ದಯಮಾಡಿ ವಾಪಸ್ ಹೋಗಿ, ಅವರು ಏನು ಉತ್ತರ ಹೇಳುತ್ತಾರೆ. ಅದನ್ನು ಕೇಳಿ

(ಭಾರತೀಯ ಜನತಾ ಪಕ್ಷದ ಸದಸ್ಯರು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಅವರು ಏನು ಹೇಳುತ್ತಾರೆ ಅದನ್ನು ಕೇಳಿರಿ.

ಶ್ರೀ ಎಸ್.ಎಂ. ಯಾಹ್ಯಾ : ಸೆಕ್ಯುಲರಿಸಂ ಕಾಂಟ್ರಾಕ್ಟ್ ಎಲ್ಲಾ ಇವರಿಗೇ ಕೊಟ್ಟುಬಿಟ್ಟಿದ್ದಾರೆ. ಇದೇ ನಿಮ್ಮ ಸಂಸ್ಕೃತಿ ಗೊತ್ತಾಗುವುದಿಲ್ಲವೇ? ಎಲ್ಲಾ ಕಡೆ ಹೊಡೆದು ಬಡಿದು ಮಾಡುವ ಸಂಸ್ಕೃತಿ.

ಶ್ರೀ ಕೆ. ಹರ್ಷಕುಮಾರ್‌ಗೌಡ : ಇದು ರಾಜಕೀಯ

ಉಪಾಧ್ಯಕ್ಷರು : ನೀವು ವೆಲ್‌ನಲ್ಲಿ ನಿಂತುಕೊಂಡು ಮಾತನಾಡುವುದು ಒಂದೂ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ಹೋಗಿ ಕುಳಿತುಕೊಳ್ಳಿ. ಮಿನಿಸ್ಟರ್‌ರವರು ಏನೋ ಕನ್‌ವಿನ್ಸ್ ಮಾಡುತ್ತಾರೆ ನೋಡಿ, ದಯವಿಟ್ಟು ಹೋಗಿ ಕುಳಿತುಕೊಳ್ಳಿ....

(ಗೊಂದಲ)

ಶ್ರೀ ಎಸ್.ಎಂ. ಯಾಹ್ಯಾ : ನೀವು ಹೇಳಿದಹಾಗೆ ನಮ್ಮ ಪಕ್ಷದ ಸದಸ್ಯರೆಲ್ಲರೂ ಕೇಳಬೇಕೇ, ಅವರು ಡಿಫೆಂಡ್ ಮಾಡಬಾರದೇ

(ಗೊಂದಲ)

Srri S.M. Yahya : How can be threaten our Members here....

ಉಪಾಧ್ಯಕ್ಷರು : ಮಂತ್ರಿಗಳು ಉತ್ತರ ಹೇಳುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಭಾರತೀಯ ಜನತಾ ಪಕ್ಷದ ಸದಸ್ಯರಲ್ಲಿ ನಾನು ವಿನಂತಿ ಮಾಡುತ್ತಿದ್ದೇನೆ. ತಾವು ಸೀಟ್‌ಗೆ ಹೋಗಿ. ಅವರು